ವಿಜಯ ಕರ್ನಾಟಕ
Online Newspaper Clipping Service
Dtd- Monday, 3rd, April- 2019
Page No.09

# ನಿಮ್ಮ ಜೀವನವನ್ನೇ ಹಾಳುಮಾಡ್ತೇನೆ!

## ಸಂಭ್ರಮ್ ಕಾಲೇಜಿನ ವಿದ್ಯಾರ್ಥಿಗಳಿಗೆ ಆಡಳಿತ ಮಂಡಳಿ ಬೆದರಿಕೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

'ನಮ್ಮನ್ನು ನೀವು ಏನು ಅಂದುಕೊಂಡಿದ್ದೀರಿ? ನಾನು ಮನಸು ಮಾಡಿದರೆ ಈ ಕ್ಷಣದಲ್ಲೇ ನಿಮ್ಮ ಜೀವನವನ್ನೇ ಹಾಳು ಮಾಡುವಷ್ಟು ತಾಕತ್ತು ನನಗಿದೆ ಹುಷಾರ್!!'

ಷರತ್ತಿನ ಮಾನ್ಯತೆ ಮೇಲೆ ನಡೆಯುತ್ತಿರುವ ಕೋಲಾರದ ಸಂಭ್ರಮ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಮತ್ತು ರಿಸರ್ಚ್(ಎಸ್‌ಐಎಂಎಸ್‌ಎಆರ್) ಉಪಾಧ್ಯಕ್ಷ ವಿದ್ಯಾರ್ಥಿಗಳನ್ನು ತರಾಟೆ ತೆಗೆದುಕೊಂಡು ಜೀವನವನ್ನೇ ಹಾಳು ಮಾಡುವುದಾಗಿ ಬೆದರಿಕೆ ಹಾಕಿರುವ ಪರಿ ಇದು. **ವಿಜಯವಾಣಿ** ಸೋಮವಾರ 'ಶೋಕ ತಂದ ಸಂಭ್ರಮ' ಎಂಬ ಶೀರ್ಷಿಕೆಯಡಿ ಸಂಭ್ರಮ್ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಅನುಭವಿಸುತ್ತಿರುವ ಶೋಷಣೆ ಮತ್ತು ಕಾನೂನು ರೀತಿಯಲ್ಲಿ ಕಾಲೇಜು ಮಾನ್ಯತೆ ಹೊಂದಿಲ್ಲದಿರುವುದನ್ನು ಪ್ರಶ್ನಿಸಿ ಸಹಾಯವಾಣಿ ವರದಿ ಪ್ರಕಟಿಸಿತ್ತು.

ವರದಿ ಪ್ರಕಟವಾದ ದಿನವೇ ಎಸ್‌ಐಎಂಎಸ್‌ಎಆರ್ ಕಾಲೇಜಿನ ಉಪಾಧ್ಯಕ್ಷ ಎನ್ನುವ ವ್ಯಕ್ತಿ ವಿದ್ಯಾರ್ಥಿಗಳನ್ನು ಕರೆದು ಮನಬಂದಂತೆ ನಿಂದಿಸಿದ್ದಾರೆ. ಜತೆಗೆ ನಿಮ್ಮ ಮುಂದಿನ ಭವಿಷ್ಯವೇ ನನ್ನ ಕೈಯಲ್ಲಿದೆ. ಕೇವಲ ವೈದ್ಯಕೀಯ ಜೀವನ ಮಾತ್ರವಲ್ಲ, ಇಡೀ ಜೀವನವನ್ನೇ ಹಾಳು ಮಾಡುತ್ತೇನೆ ಎಚ್ಚರಿಕೆ ಎಂದು ಬೆದರಿಕೆ ಹಾಕಿದ್ದಾರೆ.

ಕಾಲೇಜಿನಿಂದ ನಿಮಗೇನು ತೊಂದರೆಯಾಗಿದೆ, ಎಲ್ಲವೂ ಸರಿ ಇದೆ. ಯಾರೋ ಏನೋ ಹೇಳುತ್ತಾರೆ ಅಂತ ನೀವು ಅದನ್ನು ಕೇಳುವುದನ್ನು ಬಿಟ್ಟು ಬಿಡಿ. ಹಾಸ್ಟೆಲ್‌ನಲ್ಲಿ ಏನು ತೊಂದರೆ? ನಾಳೆಯಿಂದ ಊಟ ಸರಿ ಇಲ್ಲವೆಂದು ಯಾರೂ ದೂರು ನೀಡುವಂತಿಲ್ಲ ಎಂದೆಲ್ಲ ಬೆದರಿಕೆ ಹಾಕಲಾಗಿದೆ. ಇದರಿಂದ ಭಯಭೀತರಾಗಿರುವ ವಿದ್ಯಾರ್ಥಿಗಳು ಕಾಲೇಜು ಆಡಳಿತ ಮಂಡಳಿ ವಿರುದ್ಧ ಮಾತನಾಡಲು ಸಾಧ್ಯವಾಗದೆ ನೋವು ಅನುಭವಿಸುವಂತಾಗಿದೆ. ಅಲ್ಲದೆ, ವಿದ್ಯಾರ್ಥಿಗಳ ಸಮಸ್ಯೆ ಆಲಿಸದೆ, ನಾನು ಕೇಳುವ ಪ್ರಶ್ನೆಗೆ ಕೇವಲ 'ಹೌದು' ಅಥವಾ 'ಇಲ್ಲ' ಎಂದಷ್ಟೇ ಉತ್ತರ ನೀಡಬೇಕೆಂದು ಬೆದರಿಕೆ ಹಾಕಿದ್ದಾರೆ.

**ವಿಜಯವಾಣಿ ಫಾಲೋ ಅಪ್**

ಎಂಸಿಐ ಮಾನ್ಯತೆ ಸಿಗದೆ ವಿದ್ಯಾರ್ಥಿಗಳು ಅತಂತ್ರ

**ಶೋಕ ತಂದ ಸಂಭ್ರಮ!**



### ವರದಿಗಾರರಿಗೂ ಕರೆ

**ಕಾಲೇಜಿನ ಕರ್ಮಕಾಂಡವನ್ನು 'ವಿಜಯವಾಣಿ' ಬಯಲು ಮಾಡಿದ್ದರಿಂದ ನೇರವಾಗಿ ನಮ್ಮ ವರದಿಗಾರನಿಗೆ ಕರೆ ಮಾಡಿದ ವ್ಯಕ್ತಿಯೊಬ್ಬರು, 'ನಾನು ಕಾಲೇಜಿನ ಸಿಬ್ಬಂದಿ, ಕಾಲೇಜಿನ ಮಾಹಿತಿ ನೀಡಿದವರು ಯಾರು?' ಎಂದು ಪ್ರಶ್ನಿಸಿದ್ದಾರೆ. ನಮ್ಮ ವರದಿಗಾರ ಆ ಮಾಹಿತಿ ನೀಡಲು ಸಾಧ್ಯವಿಲ್ಲವೆಂದಾಗ, 'ಕನಿಷ್ಠ ವಿದ್ಯಾರ್ಥಿಗಳೋ ಅಥವಾ ಪಾಲಕರೋ? ಯಾರು ನಿಮಗೆ ಮಾಹಿತಿ ಕೊಟ್ಟಿದ್ದು?' ಎಂದು ಬೆದರಿಕೆ ಹಾಕುವ ರೀತಿ ಮರು ಪ್ರಶ್ನಿಸಿದ್ದಾರೆ. ಆಗಲೂ ಆ ಮಾಹಿತಿ ನೀಡಲು ಸಾಧ್ಯವಿಲ್ಲವೆಂದು ವಿಜಯವಾಣಿ ವರದಿಗಾರ ಹೇಳಿದಾಗ ಕರೆ ಕಟ್ ಮಾಡಿದ್ದಾರೆ.**

ಕನ್ನಡಪ್ರಭ



# ಕಾಲೇಜಿಗೆ ಮಾನ್ಯತೆಯಿಲ್ಲದೆ ಭಾವಿ ವೈದ್ಯರಿಗೆ ಆತಂಕ

## ಎಂಸಿಐ ಅನುಮತಿಯಿಲ್ಲದೆ 150 ವಿದ್ಯಾರ್ಥಿಗಳಿಗೆ ಬೋಧಿಸುತ್ತಿರುವ ಕೋಲಾರದ ಸಂಭ್ರಮ್ ಕಾಲೇಜು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವೈದ್ಯಕೀಯ ಶಿಕ್ಷಣ ವ್ಯಾಸಂಗ ಮುಗಿಯುತ್ತಿದ್ದರೂ ತಮ್ಮ ಕಾಲೇಜಿಗೆ ಇನ್ನೂ ಕೂಡ ಭಾರತೀಯ ವೈದ್ಯಕೀಯ ಮಂಡಳಿ (ಎಂಸಿಐ) ಮಾನ್ಯತೆಯೇ ದೊರೆಯದಿರುವುದು ಕೋಲಾರದ ಸಂಭ್ರಮ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಮತ್ತು ರಿಸರ್ಚ್‌ನ (ಎಸ್ಐಎಂಎಸ್ಆರ್) ನೂರಾರು ವಿದ್ಯಾರ್ಥಿಗಳು ಮತ್ತು ಅವರ ಪೋಷಕರಲ್ಲಿ ತೀವ್ರ ಆತಂಕ ಹೆಚ್ಚಿಸಿದೆ.

ಎಂಸಿಐ ಮಾನ್ಯತೆ ಸಿಗುವ ಮೊದಲೇ 2016-17ರಲ್ಲಿ ಸುಮಾರು 150 ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡ ಎಸ್ಐಎಂಎಸ್ಆರ್ ಕಾಲೇಜಿನ ಆಡಳಿತ ಮಂಡಳಿ 3 ವರ್ಷ ಕಳೆದರೂ ಎಂಸಿಐ ಮಾನ್ಯತೆ ಪಡೆದುಕೊಳ್ಳಲು ಹರಸಾಹಸ ಪಡುತ್ತಿದೆ. ಈ ಹಿನ್ನೆಲೆಯಲ್ಲಿ ಎದುರಾದ ವಿವಾದ ಬಗೆಹರಿಸಿಕೊಳ್ಳಲು ನಿರಂತರ ಕಾನೂನು ಹೋರಾಟವನ್ನೂ ನಡೆಸುತ್ತಿದೆ. ಆದರೆ, ವ್ಯಾಸಂಗ ಮುಗಿಯುತ್ತಾ ಬರುತ್ತಿದ್ದರೂ, ಕಾಲೇಜಿಗೆ ಎಂಸಿಐ ಮಾನ್ಯತೆ ಸಿಗದಿರುವುದು, ಅಂತಿಮವಾಗಿ ಏನು ತೀರ್ಪು ಬರುತ್ತದೋ ಎಂಬ ಆತಂಕದಿಂದ ವಿದ್ಯಾರ್ಥಿಗಳು ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಅಲ್ಲದೆ, ಕಾಲೇಜಿನ ವಿರುದ್ಧ ವಿದ್ಯಾರ್ಥಿಗಳಿಂದ ಇನ್ನಷ್ಟು ಆರೋಪಗಳಿವೆ. ಒಂದೆಡೆ ಕಾಲೇಜಿಗೆ ಎಂಸಿಐ ಮಾನ್ಯತೆ ಇಲ್ಲ ಎಂಬ ಆತಂಕವಾದರೆ, ಇನ್ನೊಂದೆಡೆ ಕಾಲೇಜಿನಲ್ಲಿ ಬೋಧಕ, ಸಿಬ್ಬಂದಿ ಕೊರತೆ ಇದೆ, ಕಾಟಾಚಾರಕ್ಕೆ ತರಗತಿ ನಡೆಸಲಾಗುತ್ತಿದೆ, ಕೂರಲು ಸರಿಯಾದ ಸ್ಥಳಾವಕಾಶವಿಲ್ಲ, ಕೆಲ ತರಗತಿಯ ಕೊಠಡಿಗಳಲ್ಲಿ ಮೇಲ್ಛಾವಣಿ ಕಳಚಿ ಬೀಳುತ್ತಿದೆ, ಪ್ರಯೋಗಾಲಯಗಳಲ್ಲಿ ಸೌಲಭ್ಯಗಳಿಲ್ಲ, ವೈದ್ಯಕೀಯ ವೃತ್ತಿ ಪ್ರಾಕ್ಟೀಸ್ ಮಾಡಲು ಆಸ್ಪತ್ರೆಯಲ್ಲಿ ರೋಗಿಗಳೂ ಇಲ್ಲ ಎಂದು ವಿದ್ಯಾರ್ಥಿಗಳು ತಮ್ಮ ನೋವು ತೋಡಿಕೊಳ್ಳುತ್ತಾರೆ. ಕೊನೆಯದಾಗಿ ನಮ್ಮನ್ನು ಬೇರೆ ಕಾಲೇಜಿಗಾದರೂ ವರ್ಗಾಯಿಸುವಂತೆ ವೈದ್ಯಕೀಯ ಶಿಕ್ಷಣ ಇಲಾಖೆ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯಕ್ಕೆ ಪತ್ರ ಬರೆದು ಮನವಿ ಮಾಡಿದರೂ ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

**ಸುಪ್ರೀಂಕೋರ್ಟ್ ಸಮಿತಿ ಷರತ್ತು:** ಎಂಸಿಐ ಮಾನ್ಯತೆ ನೀಡದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದ ಕಾಲೇಜಿಗೆ ಸರ್ವೋಚ್ಚ ನ್ಯಾಯಾಲಯ ರಚಿಸಿದ್ದ ಸಮಿತಿ ಎಂಸಿಐ ತೀರ್ಮಾನದ ಅಂತಿಮ ಷರತ್ತಿಗೆ ಒಳಪಟ್ಟು 2016-17ನೇ ಸಾಲಿನಲ್ಲಿ ವಿದ್ಯಾರ್ಥಿಗಳ ದಾಖಲಾತಿಗೆ ಅವಕಾಶ ನೀಡಿತ್ತು. ಅದರ ಆಧಾರದ ಮೇಲೆ ಕಾಮೆಡ್-ಕೆ, ಸಿಇಟಿ ಹಾಗೂ ಮ್ಯಾನೇಜ್‌ಮೆಂಟ್ ಕೋಟಾದಡಿ ನೂರಾರು ವಿದ್ಯಾರ್ಥಿಗಳನ್ನು ಕಾಲೇಜು ದಾಖಲು ಮಾಡಿಕೊಂಡಿತ್ತು. ಆದರೆ, ಈವರೆಗೂ ಎಂಸಿಐ ಮಾನ್ಯತೆ ದೊರೆತಿಲ್ಲ. ಇದೆಲ್ಲದರ ನಡುವೆ ಕಾಲೇಜಿನ ವಿದ್ಯಾರ್ಥಿಗಳು ತಾವೂ ಕೂಡ ಹೈಕೋರ್ಟ್ ಮೆಟ್ಟಿಲೇರಿದ್ದು, ತಮಗಾಗಿರುವ ಅನ್ಯಾಯ ಸರಿಪಡಿಸುವಂತೆ ಕೋರಿದ್ದಾರೆ. ಪ್ರಕರಣದ ವಿಚಾರಣೆ ಪ್ರಗತಿಯಲ್ಲಿದೆ.

**ನಮ್ಮ ಕಾಲೇಜಿನಲ್ಲಿ ಎಲ್ಲವೂ ಸರಿಯಾಗಿದೆ. ವಿದ್ಯಾರ್ಥಿಗಳು ಹೇಳುತ್ತಿರುವುದು ಸರಿ ಇದೆಯೇ ಅಥವಾ ನಾವು ಹೇಳುತ್ತಿರುವುದು ಸರಿಯೇ ಎಂಬುದನ್ನು ನೀವೇ (ಮಾಧ್ಯಮದವರು) ಬಂದು ನೋಡಿ. ಸಣ್ಣ ಪುಟ್ಟ ಸಮಸ್ಯೆ ಇರಬಹುದು. ಆದರೆ, ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗುವಷ್ಟು ಸಮಸ್ಯೆ ಇಲ್ಲ. ಡಿಸೆಂಬರ್‌ನಲ್ಲಿ ಎಂಸಿಐ ನೀಡಿರುವ ವರದಿ ಕೂಡ ಉತ್ತಮವಾಗಿದೆ.**

• **ಡಾ.ಅರುಣಾ** ಸಂಭ್ರಮ್ ಕಾಲೇಜು ಪ್ರಾಂಶುಪಾಲರು

**ಹೈಕೋರ್ಟ್ ಸೂಚನೆ ಮೇಲೆ ನಮ್ಮ ವಿಶ್ವವಿದ್ಯಾಲಯದ ಸಮಿತಿ ಕಾಲೇಜಿಗೆ ಭೇಟಿ ನೀಡಿ ಅಲ್ಲಿನ ಸಿಬ್ಬಂದಿ, ಮೂಲ ಸೌಕರ್ಯ, ಪ್ರಯೋಗಾಲಯ ಸೌಲಭ್ಯ ಎಲ್ಲವನ್ನೂ ಪರಿಶೀಲಿಸಿ ವರದಿ ಸಲ್ಲಿಸಿದೆ. ಸದ್ಯ ಆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಆಗುವುದಿಲ್ಲ. ವರದಿಯನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ.**

• **ಡಾ.ಸಚ್ಚಿದಾನಂದ,** ಆರ್‌ಜಿಯುಎಚ್‌ಎಸ್ ಕುಲಪತಿ

SDUAHER